<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>

ಸಿಸಿ ನಂ. **1041/2022**

| | | | |
|---|---|---|---|
| ಹೆಸರು | : | ವಿಠಲರಾವ | **ಚಾ.ಸಾ.1** |
| ತಂದೆಯ ಹೆಸರು | : | ಗೌಡಪ್ಪ | **ಪ್ರಾ.ಸಾ.1** |
| ವಯಸ್ಸು | : | **60** ವರ್ಷ | ದಿನಾಂಕಃ **19-06-2023** |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಮುಕರಂಬಾ | |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>

ನನಗೆ ಆರೋಪಿ ಗೊತ್ತು. ನನಗೆ ಚಾಸಾ-2 ರಿಂದ ಚಾಸಾ-14 ರವರು ಗೊತ್ತು. ಮೃತ ಶಿವಕುಮಾರ ನನ್ನ ಮಗ. ಮೃತ ಶಿವಕುಮಾರ ವಿದ್ಯೂತ ತಗಲಿದ್ದರಿಂದ ಮೃತಪಟ್ಟಿರುತ್ತಾರೆ.

ದಿನಾಂಕಃ 22-01-2022 ರಂದು ಮಧ್ಯಾಹ್ನ 1.00 ಗಂಟೆ ಸುಮಾರಿಗೆ ನಾನು ಮನೆಯಲ್ಲಿ ಇದ್ದಾಗ ನನ್ನ ಹೆಂಡತಿ ಊಟ ತೆಗೆದುಕೊಂಡು ಹೋಲಕ್ಕೆ ಹೋಗುತ್ತಿದ್ದರು ಆಗ ನನಗೆ ತಿಳಿದು ಬಂದಿದ್ದೇನೆಂದರೆ ರಾಜಪ್ಪರವರ ಮಗನ ಹೊಲದ ಮತ್ತು ಬೇರೆಯವರ ಹೊಲದ ಮಧ್ಯ ವಿದ್ಯೂತ ಕಂಬ ಉರುಳಿ ಬಿದಿದ್ದವು ಕಂಬದ ವೈರದಿಂದ ವಿದ್ಯೂತ ನನ್ನ ಮಗನಾದ ಶಿವಕುಮಾರರವರಿಗೆ ತಗಲಿದ್ದರಿಂದ ಮಧ್ಯಾಹ್ನ 1.00 ಗಂಟೆ ಸುಮಾರಿಗೆ ಮೃತಪಟ್ಟಿರುತ್ತಾನೆ. ನಾವು ಸುಮಾರು ಬಾರಿ ಆರೋಪಿಗೆ ವಿದ್ಯೂತ ಕಂಬವನ್ನು ಸರಿಯಾಗಿ ಮಾಡಲು ಹೇಳಿದರೂ ಸಹ ಅವನು ಯಾವದೇ ಕ್ರಮ ಕೈಗೊಂಡಿರಲ್ಲಿಲ.

ನಾನು ಘಟನಾ ಸ್ಥಳಕ್ಕೆ 3.00 ಗಂಟೆಗೆ ಹೋಗಿದ್ದೆ, ನನ್ನ ಹೆಂಡತಿ ನನಗಿಂತ ಮುಂಚೆ ಹೋಗಿದ್ದಳು. ನಾನು ಘಟನಾ ಸ್ಥಳಕ್ಕೆ ಹೋಗಿ ನೋಡಿದಾಗ ನನ್ನ ಮಗ ವಿದ್ಯೂತ ಕಂಬದ ಹತ್ತಿರ ಬಿದ್ದಿದ್ದ. ಮತ್ತು ಅವನ ಎರಡು ಕೈಗಳ ಚರ್ಮ ಸುಟ್ಟಿದ್ದವು. ಅದೇ ದಿನ ರಾತ್ರಿ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದರು. ನಂತರ ನನ್ನ ಮಗನಿಗೆ ಕಾಳಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಘಟನೆ ನಡೆದ ಮರುದಿನ ಪೊಲೀಸರು ಪಂಚನಾಮೆ ಮಾಡಲು ಬಂದಿದ್ದರು.

ಈಗ ನೋಡುತ್ತಿರುವ ದಾಖಲೆಯಲ್ಲಿ ಸಹಿ ನನ್ನದೆ ಇರುತ್ತದೆ. ಸದರಿ ದಾಖಲೆ ದೂರು ಆಗಿದ್ದು ಅದನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು

ಗುರುತಿಸಲಾಯಿತು. ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು. ನಿಪಿ-2 ರ ಭಾವಚಿತ್ರವನ್ನು ಕಾಳಗಿ ಆಸ್ಪತ್ರೆಯಲ್ಲಿ ತೆಗೆದುಕೊಂಡಿದ್ದಾರೆ. ನಿಪಿ-2 ರ ಭಾವಚಿತ್ರದಲ್ಲಿ ನನ್ನ ಜೊತೆ ಚಾಸಾ-13 ಮತ್ತು ಚಾಸಾ-14 ರವರು ಇದ್ದಾರೆ. ಈಗ ನೋಡುತ್ತಿರುವ ಭಾವಚಿತ್ರದಲ್ಲಿ ಸಹ ನಾನು ಇರುತ್ತೇನೆ. ಸದರಿ ಭಾವಚಿತ್ರವನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-3 ರ ಭಾವಚಿತ್ರವನ್ನು ಘಟನೆ ನಡೆದ ಹೊಲದಲ್ಲಿ ತೆಗೆದುಕೊಳ್ಳಲಾಗಿದೆ.

ನನ್ನ ಮಗ ಆರೋಪಿಯ ತಪ್ಪಿನಿಂದ ಮೃತಪಟ್ಟಿರುತಾನೆ. ಆರೋಪಿಗೆ ವೈರಗಳ ಬಗ್ಗೆ ಹೇಳಿದರೂ ಸಹ 5-6 ವರ್ಷಗಳಿಂದ ಯಾವದೇ ಕ್ರಮ ತೆಗೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ದೂರಿಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-</u>**

ನನ್ನ ಮಗ ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ಈರುಳ್ಳಿಗೆ ನೀರು ಉಣಿಸಲು ಹೋಗಿದ್ದ ಎಂದರೆ ಸರಿ. ಹೊಲದಲ್ಲಿ ಕರೆಂಟ ಕಂಬಗಳ ವೈಯರ ನೆಲಕ್ಕೆ ತಾಗುವಂತೆ ಕೇವಲ ಮೂರು ಫೀರ ಅಂತರದಲ್ಲಿ ಜೋಗಿ ಬಿದಿದ್ದವು ಎಂದರೆ ಸರಿ. ಈ ಬಗ್ಗೆ ಕೆ.ಇ.ಬಿ. ಅಧಿಕಾರಿಯಾದ ಆರೋಪಿಗೆ ಹಲವು ಬಾಗಿ ಮೌಖಿಕವಾಗಿ ಹೇಳಿದೇನೆ ಎಂದರೆ ಸಾಕ್ಷಿಗೆ ಆರೋಪಿಗೂ ಹಾಗೂ ಲೈನಮ್ಯಾನರಿಗೂ ಸಹ ಹಲವು ಬಾರಿ ಹೇಳಿದ್ದೆನೆ ಎಂದು ನುಡಿದಿದ್ದಾರೆ. ಈ ರೀತಿ ಮನುಷ್ಯನಿಗೆ ಹಾಗೂ ಇತರೆ ಪ್ರಾಣಿಗಳಿಗೆ ಜೀವಕ್ಕೆ ಅಪಾಯ ಆಗುತ್ತದೆ ಎಂದು ಗೊತ್ತಿದ್ದರೂ ಸಹ ಆರೋಪಿ ಯಾವದೇ ಕ್ರಮ ಕೈಗೊಂಡಿರಲ್ಲಿಲ್ಲ ಎಂದರೆ ಸರಿ. ನಿಪಿ-3 ರ ಭಾವಚಿತ್ರವನ್ನು ಪಂಚನಾಮೆ ಕಾಲಕ್ಕೆ ಪೊಲೀಸರು ಪಡೆದುಕೊಂಡಿದ್ದಾರೆ ಎಂದರೆ ಸರಿ. ಬೆಳಿಗ್ಗೆ 11.30 ರಿಂದ 12.30 ರ ವರೆಗೆ ಪೊಲೀಸರು ಪಂಚನಾಮೆ ಮಾಡಿದ್ದಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಎ.ಪಿ. . ವಕೀಲರು ಸಮಯ ಕೋರಿದ್ದರಿಂದ ರೂ.500/- ಖರ್ಚು ಕೊಡುವಂತೆ ಆದೇಶಿಸಿ ಮುಂದೂಡಲಾಯಿತು.</u>**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**